ಕರ್ನಾಟಕ ಸರ್ಕಾರ

ಸಂಖ್ಯೆ: ಕಾಶಿಇ/HRMS/NPS Backlog/03/2020-21

ಕಾಲೇಜು ಶಿಕ್ಷಣ ಆಯುಕ್ತರವರ ಕಛೇರಿ,
ಬೆಂಗಳೂರು, ದಿನಾಂಕ: 18/10/2021

## ಚಾಲನಾ ಆದೇಶ

**ವಿಷಯ:** ದಿನಾಂಕ:01/04/2006ರ ಪೂರ್ವದಲ್ಲಿ ರಾಜ್ಯ ಸಿವಿಲ್ ಸೇವೆಯಲ್ಲಿನ ಹುದ್ದೆಗಳ ಸಂಬಂಧದಲ್ಲಿ ಆಯ್ಕೆ ಮತ್ತು ನೇಮಕಾತಿಗಳು ನಡೆದಿದ್ದು, ಸದರಿ ದಿನಾಂಕದ ತದನಂತರದಲ್ಲಿ ನೇಮಕಗೊಳ್ಳುವ ಅಭ್ಯರ್ಥಿಗಳ ಪ್ರಕರಣಗಳಲ್ಲಿ ಹಿಂದಿನ ಡಿಫೈನ್ಡ್ ಪಿಂಚಣಿಯ ಸೌಲಭ್ಯವನ್ನು ಪರಿಗಣಿಸುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಸುತ್ತೋಲೆಸಂಖ್ಯೆ: ಆಇ 39 ಪಿಇಎನ್ 2020 (ಭಾ), ದಿನಾಂಕ: 06/08/2021
2. ಸರ್ಕಾರದ ಆದೇಶ ಸಂಖ್ಯೆ: ಆಇ 39 ಪಿಇಎನ್ 2020 (ಭಾ), ದಿನಾಂಕ: 17/02/2021

*****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ದಿನಾಂಕ: 01/04/2006ರ ಪೂರ್ವದಲ್ಲಿ ರಾಜ್ಯ ಸಿವಿಲ್ ಸೇವೆಯಡಿಯಲ್ಲಿನ ಹುದ್ದೆಗಳ ಸಂಬಂಧದಲ್ಲಿ ಆಯ್ಕೆ ಮತ್ತು ನೇಮಕಾತಿಗಳು ನಡೆದಿದ್ದು, ಸದರಿ ದಿನಾಂಕದ ನಂತರದಲ್ಲಿ ನೇಮಕವಾದ ಅಭ್ಯರ್ಥಿಗಳಿಗೆ ಎನ್.ಪಿ.ಎಸ್ ಬದಲಿಗೆ ಹಿಂದಿನ ಡಿಫೈನ್ಡ್ ಪಿಂಚಣಿಯ ಸೌಲಭ್ಯವನ್ನು ಪರಿಗಣಿಸುವಂತೆ ಆದೇಶಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಹಳೆಯ ಡಿಫೈನ್ಡ್ ಪಿಂಚಣಿಯ ಸೌಲಭ್ಯವನ್ನು ಪಡೆಯಲು ಅರ್ಹರಾಗುವ ಅಧಿಕಾರಿ/ನೌಕರರ ವಿವರಗಳನ್ನು ಮೂಲ ಸೇವಾಪುಸ್ತಕದಲ್ಲಿ ಪರಿಶೀಲಿಸಿ ಈ ಕೆಳಕಂಡ ನಮೂನೆಯಲ್ಲಿ ಭರ್ತಿ ಮಾಡಿ ಆಯಾ ಡಿ.ಡಿ.ಓ ಗಳ ದೃಢೀಕರಣದೊಂದಿಗೆ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.

| ಕ್ರ. ಸಂ | ಡಿ.ಡಿ.ಓ ಕೋಡ್ | ಪ್ರಾದೇಶಿಕ ಕಛೇರಿ/ ಕಾಲೇಜಿನ ಹೆಸರು | ನೌಕರರ ಹೆಸರು | ಪದನಾಮ | ಪ್ರಾನ್ ಸಂಖ್ಯೆ | ಸರ್ಕಾರಿ ಸೇವೆಗೆ ಸೇರಿದ ದಿನಾಂಕ |
|---|---|---|---|---|---|---|
| | | | | | | |

ಮುಂದುವರೆದು, ಉಲ್ಲೇಖ(1)ರ ಸರ್ಕಾರದ ಸುತ್ತೋಲೆಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಪರಿಚಲಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ,

1. ಪ್ರಾದೇಶಿಕ ಜಂಟಿನಿರ್ದೇಶಕರು, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಕಲ್ಬುರ್ಗಿ ಮತ್ತು ಶಿವಮೊಗ್ಗ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು:

1. ಮಾಹಿತಿ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2. ಕಛೇರಿ ಪ್ರತಿ.

ಕಾಲೇಜು ಶಿಕ್ಷಣ ನಿರ್ದೇಶಕರ ಕಚೇರಿ
ಸಂಖ್ಯೆ: 8716
ದಿನಾಂಕ: 07/8/2021

**ಕರ್ನಾಟಕ ಸರ್ಕಾರ**

ಸಂಖ್ಯೆ: ಆಇ 39 ಪಿ.ಇ.ಎನ್. 2020 (ಭಾ)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:06.08.2021.

**ಸುತ್ತೋಲೆ**

ವಿಷಯ: ದಿನಾಂಕ:01.04.2006ರ ಪೂರ್ವದಲ್ಲಿ ರಾಜ್ಯ ಸಿವಿಲ್ ಸೇವೆಯಲ್ಲಿನ ಹುದ್ದೆಗಳ ಸಂಬಂಧದಲ್ಲಿ ಆಯ್ಕೆ ಮತ್ತು ನೇಮಕಾತಿಗಳು ನಡೆದಿದ್ದು, ಆದರೆ ಸದರಿ ದಿನಾಂಕದ ತದನಂತರದಲ್ಲಿ ನೇಮಕಗೊಳುವ ಅಭ್ಯರ್ಥಿಗಳ ಪ್ರಕರಣಗಳಲ್ಲಿ ಹಿಂದಿನ ಡಿಫೈನ್ಡ್ ಪಿಂಚಣಿಯ ಸೌಲಭ್ಯವನ್ನು ಪರಿಗಣಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಆಇ 39 ಪಿಇಎನ್ 2020 (ಭಾ), ದಿನಾಂಕ:17.02.2021.

:-:-:

ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ದಿನಾಂಕ:01.04.2006ರ ಪೂರ್ವದಲ್ಲಿ ರಾಜ್ಯ ಸಿವಿಲ್ ಸೇವೆಯಡಿಯಲ್ಲಿನ ಹುದ್ದೆಗಳ ಸಂಬಂಧದಲ್ಲಿ ಆಯ್ಕೆ ಮತ್ತು ನೇಮಕಾತಿಗಳು ನಡೆದಿದ್ದು, ಸದರಿ ದಿನಾಂಕದ ನಂತರದಲ್ಲಿ ನೇಮಕವಾದ ಅಭ್ಯರ್ಥಿಗಳಿಗೆ ಎನ್.ಪಿ.ಎಸ್. ಬದಲಿಗೆ ಹಿಂದಿನ ಡಿಫೈನ್ಡ್ ಪಿಂಚಣಿಯ ಸೌಲಭ್ಯವನ್ನು ಪರಿಗಣಿಸುವಂತೆ ಆದೇಶಿಸಲಾಗಿರುತ್ತದೆ. ಆದುದರಿಂದ ಸದರಿ ಅಧಿಕಾರಿ/ಸಿಬ್ಬಂದಿ ವರ್ಗದವರ ಪ್ರಾನ್ ಖಾತೆಯಲ್ಲಿರುವ ಎನ್.ಪಿ.ಎಸ್. ವಂತಿಗೆಯನ್ನು ಹಿಂಪಡೆಯಬೇಕಿರುವ ಹಿನ್ನೆಲೆಯಲ್ಲಿ, **ಇಲಾಖಾ ಹಂತದಲ್ಲಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಬೇಕಿರುತ್ತದೆ:-**

1. ಸದರಿ ನೌಕರರಿಗೆ ಎನ್.ಪಿ.ಎಸ್. ಬದಲಿಗೆ ಹಳೆ ಪಿಂಚಣಿ ಯೋಜನೆಯ ಸೌಲಭ್ಯಗಳು ದೊರೆಯುವ ಕಾರಣ ವೇತನದಿಂದ ಕಟಾವಣೆಯಾಗುವ ಎನ್.ಪಿ.ಎಸ್. ವಂತಿಗೆಯನ್ನು ಹೆಚ್.ಆರ್.ಎಂ.ಎಸ್. ನಲ್ಲಿ ಸ್ಥಗಿತಗೊಳಿಸಬೇಕಿರುತ್ತದೆ. ಈ ಬಗ್ಗೆ ಇಲಾಖಾ ಮುಖ್ಯಸ್ಥರು ಹೆಚ್.ಆರ್.ಎಂ.ಎಸ್. ಹಂತದಲ್ಲಿ ಕ್ರಮ ಕೈಗೊಳ್ಳಬೇಕಿರುತ್ತದೆ ಹಾಗೂ ನೂತನ ಪಿಂಚಣಿ ಯೋಜನೆ ಘಟಕ, ಖಜಾನೆ ಆಯುಕ್ತಾಲಯ ಇವರಿಗೆ ಈ ಬಗ್ಗೆ ಮಾಹಿತಿ ನೀಡಬೇಕಾಗಿರುತ್ತದೆ.

2. ಎನ್.ಪಿ.ಎಸ್. ಬದಲಿಗೆ ಹಳೆಯ ಡಿಫೈನ್ಡ್ ಪಿಂಚಣಿ ಪಡೆಯಲು ಅರ್ಹರಾಗುವ ಅಧಿಕಾರಿ/ನೌಕರರ ಹೆಸರು, ಪದನಾಮ ಪ್ರಾನ್ ಸಂಖ್ಯೆ ಪಟ್ಟಿ ಮಾಡಿ, ಇಲಾಖಾ ಮುಖ್ಯಸ್ಥರಿಂದ ದೃಢೀಕರಣದ ಆದೇಶವನ್ನು ಖಜಾನೆ ಆಯುಕ್ತಾಲಯದ ಎನ್.ಪಿ.ಎಸ್. ಘಟಕಕ್ಕೆ ನೀಡುವುದು.

3. ಈ ಆದೇಶವನ್ನು ಅನುಸರಿಸಿ ಆದೇಶದಲ್ಲಿ ಒಳಪಡುವ ಅಧಿಕಾರಿ/ನೌಕರರ ವೇತನದಿಂದ ಈವರೆಗೆ ಕಟಾವಣೆಯಾಗಿ ಪ್ರಾನ್ ಖಾತೆಗೆ ಜಮೆಯಾಗಿರುವ ಮೊತ್ತವನ್ನು

CRA ರವರಿಂದ Error Rectification Module (ERM) ಮೂಲಕ ಹಿಂಪಡೆಯಬೇಕಿರುತ್ತದೆ.

**ERM ಪ್ರಕ್ರಿಯೆಯನ್ನು ಕೈಗೊಳ್ಳಲು ಈ ಕೆಳಕಂಡ ದಾಖಲೆಗಳನ್ನು ಡಿಡಿಓರವರು ಖಜಾನೆಗೆ ಸಲ್ಲಿಸಬೇಕಿರುತ್ತದೆ:**

1. ಎನ್.ಪಿ.ಎಸ್. ನಿಂದ ERM ಗೆ ಪರಿವರ್ತಿಸಲು ನಿಗದಿತ ನಮೂನೆಯಲ್ಲಿ ಪ್ರಸ್ತಾವನೆ ಹಾಗೂ ನೌಕರರು ಎನ್.ಪಿ.ಎಸ್. ಯೋಜನೆಗೆ ಒಳಪಡುವುದಿಲ್ಲವೆಂದು Annexure-1 ಫಾರಂನಲ್ಲಿ ಇಲಾಖಾ ಮುಖ್ಯಸ್ಥರಿಂದ ದೃಢೀಕರಣ (ನಮೂನೆ ಲಗತ್ತಿಸಿದೆ).

2. ಪ್ರಾನ್ ಖಾತೆಗೆ ಸಂಬಂಧಿಸಿದ SOT (Statement of Transaction) ಅಥವಾ ವೇತನದಿಂದ ಕಡಿತಗೊಳಿಸಿದ ಎನ್.ಪಿ.ಎಸ್. ಮೊತ್ತದ ವಿವರಗಳ ತಃಖ್ತೆ ಮತ್ತು ತಃಖ್ತೆಯಲ್ಲಿ ನಮೂದಿಸಿರುವುದಲ್ಲದೇ ಇನ್ನ್ಯಾವುದೇ ಮೊತ್ತ ಎನ್.ಪಿ.ಎಸ್. ಸಂಬಂಧ ಕಟಾವಣೆಯಾಗಿರುವುದಿಲ್ಲ ಎಂದು ನೌಕರರಿಂದ ದೃಢೀಕರಣ ಇರತಕ್ಕದ್ದು.

ಪ್ರಸ್ತಾವನೆಯನ್ನು ಯುಕ್ತದ್ವಾರದಲ್ಲಿ ಸಂಬಂಧಪಟ್ಟ ವೇತನ ಪಡೆಯುವ ಖಜಾನೆಗೆ ಸಲ್ಲಿಸಬೇಕಿರುತ್ತದೆ.

ಖಜಾನೆಯವರು ಡಿಡಿಓ ರವರಿಂದ ಸ್ವೀಕೃತಗೊಂಡ ERM ಪ್ರಸ್ತಾವನೆಯನ್ನು ಪರಿಶೀಲಿಸಿ, ಸರಿಯಿದ್ದಲ್ಲಿ CRA ವೆಬ್ ಸೈಟ್ ನಲ್ಲಿ ERM claim ಅನ್ನು online ನಲ್ಲಿ ಇನಿಷೀಯೇಟ್ ಹಾಗೂ ವೆರಿಫೈ ಮಾಡಿದ ಪ್ರಸ್ತಾವನೆಯನ್ನು Authorise ಮಾಡಲು ಎನ್.ಪಿ.ಎಸ್. ಘಟಕಕ್ಕೆ ಸಲ್ಲಿಸಬೇಕಿರುತ್ತದೆ.

**<u>ERM ಪ್ರಕ್ರಿಯೆ ಸಂಬಂಧ ಎನ್.ಪಿ.ಎಸ್. ಘಟಕದಲ್ಲಿ ಕೈಗೊಳ್ಳಬೇಕಾದ ಕ್ರಮ</u>**

1. ಖಜಾನೆಯಿಂದ ಸ್ವೀಕೃತಗೊಂಡ ERM ಪ್ರಸ್ತಾವನೆಯನ್ನು ಪರಿಶೀಲಿಸುವುದು.

2. ಸದರಿ ಪ್ರಸ್ತಾವನೆಯು ಸರಿಯಿದ್ದಲ್ಲಿ ERM Claim ಅನ್ನು authorise ಮಾಡಿ CRA ಗೆ ಕಳುಹಿಸಲಾಗುವುದು.

3. ಪ್ರಾನ್ ಖಾತೆಯಲ್ಲಿ ಶೇಖರಣೆಗೊಂಡಿರುವ ಸಂಪೂರ್ಣ ಮೊತ್ತವನ್ನು (ಸರ್ಕಾರದ ವಂತಿಗೆ ಮತ್ತು ಅದರ ಮೇಲಿನ ಆದಾಯ ಹಾಗೂ ನೌಕರರ ವಂತಿಗೆ ಮತ್ತು ಅದರ ಮೇಲಿನ ಆದಾಯ) (T+3) ದಿನಗಳಲ್ಲಿ ಆಯುಕ್ತರ ಪದನಾಮದಲ್ಲಿ SBI, ಶಿವಾಜಿನಗರ ಶಾಖೆಯಲ್ಲಿ ತೆರೆದಿರುವ Proxy pool ಖಾತೆಗೆ CRA ಯಿಂದ ಜಮೆ ಮಾಡಲಾಗುತ್ತದೆ.

4. ಜಮೆಯಾದ ಮೊತ್ತದ ವಿವರವನ್ನು CRA ರವರು ಎನ್.ಪಿ.ಎಸ್. ಘಟಕಕ್ಕೆ email ಮುಖಾಂತರ ಮಾಹಿತಿ ನೀಡುತ್ತಾರೆ.

5. ಎನ್.ಪಿ.ಎಸ್. ಘಟಕವು ಬ್ಯಾಂಕ್ ಖಾತೆಗೆ ಜಮೆಯಾಗಿರುವ ಮೊತ್ತವನ್ನು ಖಜಾನೆ-2 ಚಲನ್ ಮುಖಾಂತರ ಲೆಕ್ಕ ಶೀರ್ಷಿಕೆ 8342-00-117-0-18-701 ಗೆ ಜಮೆ ಮಾಡಲಾಗುತ್ತದೆ.

6. ಸರ್ಕಾರದ ವಂತಿಗೆ ಹಾಗೂ ಅದರ ಮೇಲಿನ ಆದಾಯವನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಲು ಹಾಗೂ ನೌಕರರ ವಂತಿಗೆ ಹಾಗೂ ಅದರ ಮೇಲಿನ ಆದಾಯವನ್ನು ನೌಕರರಿಗೆ ಇ-ಪಾವತಿ ಮೂಲಕ ಪಾವತಿಸಲು ಅಧಿಕೃತ ಜ್ಞಾಪನವನ್ನು ಪಾವತಿಗಾಗಿ ಎನ್.ಪಿ.ಎಸ್. ಘಟಕದಿಂದ ಬೆಂಗಳೂರು ನಗರ ಜಿಲ್ಲಾ ಖಜಾನೆಗೆ ಕಳುಹಿಸಲಾಗುವುದು.

7. ಈ ಜ್ಞಾಪನದ ಅನ್ವಯ ನಗರ ಜಿಲ್ಲಾ ಖಜಾನೆಯಲ್ಲಿ CTS '8' ರ ಬಿಲ್ಲನ್ನು ಸಿದ್ಧಪಡಿಸಿ ಸರ್ಕಾರದ ವಂತಿಗೆಯನ್ನು ಹಾಗೂ ಅದರ ಮೇಲಿನ ಆದಾಯವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆ TTR ಹೊಂದಾಣಿಕೆ ಮಾಡಿ ಪಾವತಿಸುವುದು.

| ಕ್ರ. ಸಂ. | ಖರ್ಚು ಲೆಕ್ಕಶೀರ್ಷಿಕೆ (Debit) | ಜಮೆ ಲೆಕ್ಕ ಶೀರ್ಷಿಕೆ (Credit) | ಷರಾ |
|---|---|---|---|
| 1 | 8342-00-117-0-18-701 | 2071-01-911-0-02 (ROP) | ಸರ್ಕಾರದ ವಂತಿಗೆ |
| 2 | 8342-00-117-0-18-701 | 0049-04-800-0-01 | ಸರ್ಕಾರದ ವಂತಿಗೆ ಮೇಲಿನ ಆದಾಯ |

ನೌಕರರ ವಂತಿಗೆ ಹಾಗೂ ಅದರ ಮೇಲಿನ ಆದಾಯವನ್ನು ನೌಕರರ GPF ಖಾತೆಗೆ ಪಾವತಿಸಲು ಸಂಬಂಧಿಸಿದ ಇಲಾಖೆಯವರು ಈ ಕೆಳಕಂಡಂತೆ ಕ್ರಮ ಕೈಗೊಳ್ಳುವುದು:-

1. ಇಲಾಖಾ ಮುಖ್ಯಸ್ಥರು ಅರ್ಹ ಅಧಿಕಾರಿ/ಸಿಬ್ಬಂದಿಗಳಿಂದ ಭವಿಷ್ಯ ನಿಧಿ ಖಾತೆಯನ್ನು ತೆರೆಯಲು ಸಾಮಾನ್ಯ ಭವಿಷ್ಯ ನಿಧಿ ನಮೂನೆ-1 ಹಾಗೂ ನಾಮನಿರ್ದೇಶನವನ್ನು ನಮೂನೆ-2ರಲ್ಲಿ ಪಡೆದು ಮಹಾಲೇಖಪಾಲರಿಗೆ ಸಾಮಾನ್ಯ ಭವಿಷ್ಯ ನಿಧಿ ಖಾತೆಯನ್ನು ತೆರೆಯಲು ಕಳುಹಿಸಿಕೊಡುವುದು.

2. ಒಮ್ಮೆ ಮಹಾಲೇಖಪಾಲರು ಖಾತೆಯನ್ನು ತೆರೆದು ಖಾತೆ ಸಂಖ್ಯೆಯನ್ನು ಹಂಚಿಕೆ ಮಾಡಿದಲ್ಲಿ ಸದರಿ ಪ್ರಾಧಿಕಾರದ ಪ್ರತಿಯೊಂದಿಗೆ ಸಂಬಂಧಿಸಿದ ಜಿ.ಪಿ.ಎಫ್. ಖಾತೆಗಳಿಗೆ ನೌಕರರ ಎನ್.ಪಿ.ಎಸ್ ವಂತಿಗೆ ಹಾಗೂ ಅದರ ಮೇಲೆ ಗಳಿಸಿರುವ ಆದಾಯವನ್ನು ಜಮೆ ಮಾಡುವಂತೆ ಖಜಾನೆ ಆಯುಕ್ತರು ಇವರಿಗೆ ಎನ್.ಪಿ.ಎಸ್. ಪ್ರಾನ್ ಸಂಖ್ಯೆ ಮುಂತಾದ ವಿವರಗಳೊಂದಿಗೆ ಮನವಿಯನ್ನು ಸಲ್ಲಿಸುವುದು.

3. ಖಜಾನೆ ಆಯುಕ್ತಾಲಯದ ಎನ್.ಪಿ.ಎಸ್. ಘಟಕದಲ್ಲಿ ಮೇಲ್ಕಂಡ ವಿವರಗಳನ್ನು ಪರಿಶೀಲಿಸಿ, CRA ಯಿಂದ ದೃಢೀಕರಿಸಿ ಪಡೆದ ಮೊತ್ತಕ್ಕೆ ಖಜಾನೆ-2ರಲ್ಲಿ 8009-01-101-0-01 ಲೆಕ್ಕ ಶೀರ್ಷಿಕೆಯಡಿ ಜಿ.ಪಿ.ಎಫ್. ಚಲನ್ ಅನ್ನು ಸೃಜಿಸಿ Proxy Pool ನಿಂದ ಮೊತ್ತವನ್ನು ಕಟಾವಣೆ ಮಾಡಿ, ಚಲನ್‌ನ ಒಂದು ರಶೀದಿಯನ್ನು ಆಯಾ ಕಛೇರಿಯ ಆದೇಶದೊಂದಿಗೆ ಇಲಾಖಾ ಮುಖ್ಯಸ್ಥರಿಗೆ ಮುಂದಿನ ಕ್ರಮ ವಹಿಸಲು ನೀಡುವುದು.

4. ಇಲಾಖಾ ಮುಖ್ಯಸ್ಥರು ಸದರಿ ಚಲನ್ ಆಧಾರದ ಮೇಲೆ ಮಹಾಲೇಖಪಾಲರ ಕಛೇರಿಯಲ್ಲಿ ಜಮೆ ತೆಗೆದುಕೊಂಡು ನಿಯಮಾನುಸಾರ ನಿರ್ವಹಿಸುವುದು.

5. ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳ ಕಛೇರಿಯ ಡಿಡಿಓ ರವರು ಪ್ರತಿ ಮಾಹೆ ಜಿ.ಪಿ.ಎಫ್. ನಿಗಧಿತ ಮಾಸಿಕ ವಂತಿಗೆಯನ್ನು ವೇತನ ಬಿಲ್ಲಿನಲ್ಲಿ ಕಡಿತಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

(ಕುಮಟಾ ಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ ಮತ್ತು
ಆರ್ಥಿಕ ಆಯೋಗ ಕೋಶ).
06/08/2021

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ.), ಕರ್ನಾಟಕ ಹೊಸಕಟ್ಟಡ, "ಆಡಿಟ್ ಭವನ" ಪೋಸ್ಟ್ ಬಾಕ್ಸ್ ಸಂಖ್ಯೆ: 5398, ಬೆಂಗಳೂರು 560 001.
2. ಮಹಾಲೇಖಪಾಲರು (ಇ & ಆರ್.ಎಸ್.ಎ.), ಕರ್ನಾಟಕ ಹೊಸಕಟ್ಟಡ, "ಆಡಿಟ್ ಭವನ" ಪೋಸ್ಟ್ ಬಾಕ್ಸ್ ಸಂಖ್ಯೆ:5398, ಬೆಂಗಳೂರು 560 001.
3. ಮಹಾಲೇಖಪಾಲರು (ಎ & ಇ), ಕರ್ನಾಟಕ, ಪೋಸ್ಟ್ ಬಾಕ್ಸ್ ಸಂಖ್ಯೆ:5329/5369, ಪಾರ್ಕ್ ಹೌಸ್ ರೋಡ್, ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು/ ಅಪರ ಮುಖ್ಯ ಕಾರ್ಯದರ್ಶಿಗಳು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.
7. ಎಲ್ಲಾ ಜಿಲ್ಲಾಧಿಕಾರಿಗಳು.
8. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ ಮೈಸೂರು/ಬೆಳಗಾವಿ/ಗುಲ್ಬರ್ಗ.
9. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
10. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
11. ಖಜಾನೆ ಆಯುಕ್ತರು, ಖಜಾನ ಆಯುಕ್ತಾಲಯ, 6ನೇ ಮಹಡಿ, ಕೆ.ಪಿ.ಸಿ.ಎಲ್. ಬಿಲ್ಡಿಂಗ್, ಅರಮನೆ ರಸ್ತೆ, ಬೆಂಗಳೂರು 560 001.
12. ಖಜಾನೆ ಅಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ / ಜಿಲ್ಲಾ ಖಜಾನೆಗಳು.
13. ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸಸೌಧ, ಬೆಂಗಳೂರು.
14. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.